ಕೊಟ್ಟಿದ್ದಾರೆ. ಆ 103 ಕೋಟಿ ರೂಪಾಯಿಗಳು ಹೇಗೆ ಕರ್ಚಾಯಿತು? ಅಲ್ಲಿ ಏನು ಕೆಲಸಗಳು ಆಗಿದೆ? ಇದರಲ್ಲಿ ಟೆಂಡರ್ ಪಾರದರ್ಶಕತೆಯ ಉಲ್ಲಂಘನೆ ಆಗಿದೆ. ಇದರ ಬಗ್ಗೆ ಸೂಕ್ತವಾದಂತಹ ಕ್ರಮವನ್ನು ಸರ್ಕಾರವು ಜರುಗಿಸಬೇಕೆಂದು ನಾನು ತಮ್ಮ ಮೂಲಕ ಒತ್ತಯ ಮಾಡುತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ (ಮಾನ್ಯ ಸಣ್ಣ ನೀರಾವರಿ ಹಾಗು ಕನ್ನಡ ಮತ್ತು ಸಂಸ್ಕೃತಿ ಸಚಿವರು)** : ಮಾನ್ಯ ಬೃಹತ್ ನಿರಾವರಿ ಸಚಿವರು ಸದನದಲ್ಲಿಲ್ಲ. ಈ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಹಾಗಾಗಿ ಸಚಿವರು ಬಂದ ನಂತರ ಅವರಿಗೆ ಉತ್ತರ ಕೊಡಿಸುತ್ತೇನೆ.

**ಅಧ್ಯಕ್ಷರು** : ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಕೆ.ಎಸ್.ಈಶ್ವರಪ್ಪನವರು ನಿಮ್ಮ ವಿಷಯ, ಗೋಪಾಲ ಭಂಡಾರಿಯವರು ಮಾತನಾಡಿ.

**9. ವಿಷಯ : ಸೈಟುಗಳನ್ನು ನೋಂದಣಿ ಮಾಡಿಸಿಕೊಳ್ಳುವ ಬಗ್ಗೆ.**

ಶ್ರೀ ಹೆಚ್.ಗೋಪಾಲ ಭಂಡಾರಿ (ಕಾರ್ಕಳ) : ನಮ್ಮ ಜಿಲ್ಲೆಯಲ್ಲಿ ಜಿಲ್ಲಾಧಿಕರಿಗಳಿಂದ ಇತ್ತೀಚೆಗೆ ಒಂದು ಸುತ್ತೋಲೆ ಬಂದಿದೆ. ಎಲ್ಲಾ ಸಬ್ ರಿಜಿಸ್ಟ್ರಾರ್‌ಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿ ಏನು residential purpose ಗೆ ಆದಂಥ ಭೂಮಿ ಏನಿವೆ ಅದನ್ನು ನೋಂದಾಯಿಸ ಬಾರದು ಇನ್ನೊಬ್ಬರಿಗೆ ಮಾರಾಟ ಪತ್ರವನ್ನು ನೋಂದಾವಣಿ ಮಾಡಬೇಕಾದರೆ Town Planning Authority ಯ approval ತೆಗೆದುಕೊಂಡು ಮಾಡಬೇಕೆಂದು ಹೇಳಿದ್ದಾರೆ. ಹಾಗೆಯೇ registration ಮಾಡಿದ್ದರೆ ಅದನ್ನು ಮಾಡಲೇಬಾರದು ಎಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. Town Planning Authority ಉಡುಪಿಯಲ್ಲಿದೆ, ನಮ್ಮ ತಾಲ್ಲೂಕಿನಲ್ಲಿಲ್ಲ. ಗ್ರಾಮೀಣ ಪ್ರದೇಶದಲ್ಲಿಲ್ಲ, ಅಂಥ ಪ್ರದೇಶಗಳಲ್ಲಿ ಅದಕ್ಕೆ Town Planning Authority ಯಿಂದ approval ತೆಗೆದುಕೊಂಡು ಬರದಿದ್ದರೆ ನಾವು ನೋದಾವಣಿ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ನಿರಾಕರಣೆ ಮಾಡುತ್ತಿದ್ದಾರೆ. ಇದರಿಂದಾಗಿ ಏನಾಗಿದೆ ಎಂದರೆ ಬಹಳಷ್ಟು ಜನ ಬೇರೆಯವರ ಹತ್ತಿರ ಸೈಟುಗಳನ್ನು ತೆಗೆದುಕೊಳ್ಳುವುದಕ್ಕೆ ಹೊರಟರೆ ನೋಂದಾವಣಿ ಆಗದೇ ಇರುವಂಥ ಪರಿಸ್ಥಿತಿ ಆಗಿದೆ. ಅದರ ಜೊತೆಗೆ ಏನಾದರೂ ಪಂಚಾಯತ್‌ನವರ NOC

ಮುನಿಸಿಪಾಲಿಟಿಯವರ NOC ತೆಗೆದುಕೊಳ್ಳೋಣವೆಂದರೆ ಅವರಿಗೂ ಕೂಡ NOC ಕೊಡಬೇಡಿ ಎಂದು ಮಾಹಿತಿ ಬಂದಿದೆ. ಇದರಿಂದ ಬಹಳಷ್ಟು ಜನರಿಗೆ ತೊಂದರೆಯಾಗಿದೆ. ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು. ತಕ್ಷಣ ಇದಕ್ಕೆ ಒಂದು ಪರಿಹಾರವನ್ನು ಮಾಡಬೇಕು ಎಂದು ನಾನು ವಿನಂತಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಶಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)** : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಗೋಪಾಲ ಭಂಡಾರಿಯವರು ಏನು ಪ್ರಸ್ತಾಪ ಮಾಡಿದ್ದಾರೆ ಇದನ್ನು ನಾಳೆ ತಾವು ಬಂದರೆ ನಮ್ಮ ಕಛೇರಿಗೆ ಸಂಬಂಧಪಟ್ಟ ಅಧಿಕರಿಗಳನ್ನು ಕರೆಸಿ ಅನುಕೂಲವನ್ನು ಮಾಡಿಕೊಡುತ್ತೇನೆ.

**10. ವಿಷಯ : ಮಂಗಳೂರಿನಲ್ಲಿ ಮಾದಕ ದ್ರವ್ಯಸೇವನೆಯ ತಡೆಗಟ್ಟಲು ಕ್ರಮ ಕೈಗೊಳ್ಳುವ ಬಗ್ಗೆ.**

**ಶ್ರೀ ಯು.ಟಿ.ಖಾದರ್ (ಮಂಗಳೂರು)** : ಮೊನ್ನೆ ಮಾದಕ ದ್ರವ್ಯ ಸೇವಿಸಿ ಕುಮರಿ ಸ್ವಪ್ನ ಎಂಬುವವರು ಸಾವನ್ನಪ್ಪಿದ್ದಳು. ಅಂದು ಈ ವಿಷಯ ಪ್ರಸ್ತಾಪ ಮಾಡಿದ್ದೇನೆ. ಇಂದು ಚರ್ಚೆಯಾಗಬೇಕಾಗುತ್ತದೆ. ಯಾರು ಸಪ್ಲೈ ಮಡುತ್ತಿದ್ದಾರೆಂದು ತನಿಖೆ ಆಗಬೇಕು. ಇದರ ಬಗ್ಗೆ ಉತ್ತರ ಕೊಡಬೇಕು. ಅಲ್ಲಿ ಯಾವ ಸಪ್ಲೈ ಮಾಡುತ್ತಿದ್ದಾರೆಂದು ತನಿಖೆ ಆಗಬೇಕು. ಇದರ ಬಗ್ಗೆ ಉತ್ತರ ಕೊಡಬೇಕು. ಅಲ್ಲಿ ಯಾವ ಮಾಫಿಯಾದವರು ಇದ್ದಾರೆ ಅದನ್ನು ಪತ್ತೆ ಹಚ್ಚಬೇಕು. ಉಡುಪಿಯ ಪಾರ್ಟಿಯಲ್ಲಿ ಬಹಿರಂಗವಾಗಿ ಟಿವಿಯಲ್ಲಿ ಮಾದಕ ದ್ರವ್ಯ ಸೇರಿಸುವ ಬಗ್ಗೆ ಬಂದಿತು. ಹಾಗಾಗಿ ಯಾರು ಡ್ರಗ್ಸ್ ತಂದಿದ್ದಾರೆಂಬ ಬಗ್ಗೆ ತನಿಖೆ ಮಾಡಬೇಕು. ಆದರೆ ಇವತ್ತಿನ ತನಕ ತನಿಖೆ ಆಗಲಿಲ್ಲ. ಅದರಿಂದಾಗಿ ಪದೇ ಪದೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಘಟನೆ ನಡೆಯುತ್ತಿದೆ. ಇದಕ್ಕೆ ಸರ್ಕಾರ ಯಾವುದಾದರೂ ಕಡಿವಾಣ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಪಬ್‌ಗೆ, ಲೈವ್ ಬ್ಯಾಂಡ್‌ಗೆ ಲೈಸೆನ್ಸ್ ಕೊಡುತ್ತಾರೆ. ಲೈವ್‌ಬ್ಯಾಂಡ್‌ಗೆ ಜ್ಯೂಸ್ ಕುಡಿಯಲಿಕ್ಕೆ ಯಾರಾದರೂ ಹೋಗುತ್ತಾರೆಯೇ? ಇದಕ್ಕೆ ಏಕೆ ಲೈಸೆನ್ಸ್ ಕೊಡಬೇಕು?